ಶ್ರೀ ಎಂ. ಪೈ. ಫೋರ್ಪಡೆ.—ಆ ಸಂಖ್ಯೆ ನನ್ನೆ ಕಡೆ ಈಗ ಇಲ್ಲ. ಬೇಕಾದರೆ ತಮಗೆ ಒವಗಿಸಿಕೊಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ.—ಈ ಕ್ಲಾಸ್—3 ಮತ್ತು ಕ್ಲಾಸ್—4 ನೌಕರರಿಗೆ ಈ ವೈದ್ಯಕೀಯ ನೆರವು ಸಕಾಲದಲ್ಲಿ ದೊರೆಯುತ್ತಿಲ್ಲ.— ನೌಕರರ ಮನೆಯಲ್ಲಿ ಯಾರಾದರೂ ಕಾಯಿಲೆ ಬಿದ್ದರೆ ಅವರಿಗೆ ತಕ್ಷಣ ಪರಿಹಾರ ಕೊಡುವಂತಹ ವ್ಯವಸ್ಥೆಯನ್ನು ಜಾರಿಗೆ ತರುತ್ತೀರಾ ?

ಶ್ರೀ ಎಂ. ಪೈ. ಫೆರ್ಪಡೆ.—ಈಗಿನ ರೂಲ್ಸ್‌ನ್ನು ಸಾಧ್ಯವಾದ ಮಟ್ಟಿಗೆ ತೃಪ್ತಿಕರವಾಗಿ ಮಾಡಲಾಗಿದೆ. ಇದನ್ನು ಇನ್ನಷ್ಟು ತೃಪ್ತಿಕರವಾಗಿ ಮಾಡುವುದಿದ್ದರೆ, ಆ ಬಗ್ಗೆ ಮಾನ್ಯ ಸದಸ್ಯರು ಸಲಹೆ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ಮಾನ್ಯ ಸದಸ್ಯರು ಹೇಳುವುದು ಕೇವಲ ಭಾಷಣವಾಗುತ್ತದೆ, ಊಹೆಯಾಗುತ್ತದೆ ಅಥವಾ ಅವರ ಒಪೀನಿಯನ್ ಆಗುತ್ತದೆ. ಅದರಿಂದ ಸರ್ಕಾರಕ್ಕೆ ಸಹಾಯವಾದಂತಾಗುವುದಿಲ್ಲ. ಆದ್ದರಿಂದ ಸಲಹೆಗಳು ಏನಾದರು ಇದ್ದರೆ ಕೊಟ್ಟರೆ ಒಳ್ಳೆಯದು.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ಹಾಲು ಇರುವ ಪದ್ಧತಿ ಮೇರೆಗೆ ಪಾರ್ಸ್‌ಪೋಚರ್ ಕೊಡುವುದಕ್ಕೆ ಅವಕಾಶವಿದೆ. ಇದರಿಂದ ಎಲ್ಲರಿಗೂ ಸಮಾನ್ಯಾಯ ದೊರೆತಂತಾಗುವುದಿಲ್ಲ. ಈ ಕಾರಣದಿಂದ ಸರ್ಕಾರಕ್ಕೆ ಸ್ವಲ್ಪ ಹೆಚ್ಚು ಖರ್ಚಾದರೂ ಸಹ, ತುಕೋಳ್ ಆಯೋಗದ ವರದಿಯಂತೆ ಎಲ್ಲರಿಗೂ ವೈದ್ಯಕೀಯ ಭತ್ಯ ಕೊಟ್ಟು ನ್ಯಾಯ ದೊರಕಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಪೈ. ಫೋರ್ಪಡೆ.—ಇದರ ಉದ್ದೇಶವಾದರೂ ಕೂಡ ಕಾಯಿಲೆ ಇದ್ದವರಿಗೆ ಸಹಾಯ ಕೊಡಬೇಕು ಎಂಬುದು. ಸರ್ವೇಸಾಮಾನ್ಯವಾಗಿ ಎಲ್ಲರೂ ಏಕಕಾಲದಲ್ಲಿ ಕಾಯಿಲೆ ಬೀಳುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತು. ಎಲ್ಲರಿಗೂ ವೈದ್ಯಕೀಯ ಭತ್ಯವನ್ನು ಕೊಟ್ಟರೆ ಅದು ವೈದ್ಯಕೀಯ ಭತ್ಯವೆನಿಸಿಕೊಳ್ಳುವುದಿಲ್ಲ. ಅದು ಡಿ.ಎ. ಎನಿಸಿಕೊಳ್ಳುತ್ತದೆ. ಆ ರೀತಿ ಏನಾದರು ಕೊಟ್ಟರೆ ಸರ್ಕಾರಕ್ಕೆ ವರ್ಷಪೊಂದಕ್ಕೆ 2 ಕೋಟಿ 23 ಲಕ್ಷ ರೂಪಾಯಿಗಳ ಖರ್ಚು ಬರುತ್ತದೆ. ಈಗಿನ ಪದ್ಧತಿಯ ಪ್ರಕಾರ ವರ್ಷವೊಂದಕ್ಕೆ 12 ರಿಂದ 15-ಲಕ್ಷ ರೂಪಾಯಿಗಳು ಖರ್ಚಾಗುತ್ತಿದೆ. ಈ ಕಾರಣದಿಂದ ನಮಾರು 2 ಕೋಟಿ 23 ಲಕ್ಷ ರೂಪಾಯಿಗಳನ್ನು ವೈದ್ಯಕೀಯ ಭತ್ಯವನ್ನಾಗಿ ಕೊಡುವುದು ಸರಿಯಾದ ಕ್ರಮವಲ್ಲ ಎಂಬುದು ಸರ್ಕಾರದ ಅಭಿಪ್ರಾಯವಾಗಿದೆ.

EYE BANK IN GOVERNMENT HOSPITALS IN BANGALORE.

261. Sri S. KARIYAPPA (Kanakapura) :—

Will the Minister for Health be pleased to state :—

(*a*) whether an Eye Bank has been opened in Ophthalmic Hospital at Bangalore ;

(*b*) if so, the names of places inside and outside the country from where donation of eyes are collected ;

(*c*) the number of operations performed in which new eyes are planted ;

(*d*) the percentage of successful operations ;

(*e*) the number of eyes received and planted during the last twelve months (Monthwise figures may be furnished) ?

Minister for Health (Sri H. SIDDAVEERAPPA).—

(*a*) Yes.

(*b*) 1. Victoria Hospital, Bangalore, H.A.L. Hospital, Bangalore.

2. Ceylon International Eye Bank under the auspices of Maha Bodhi Maitri Mandala, Bangalore.

(*c*) Whole eyes have not been transplanted anywhere in the World but only corneas are grafted. Forty-three corneal grafting operations have been performed in this Institution.

(*d*) All grafts have been taken up except for one which was rejected by the host. Vision has improved in 80 per cent of cases.

(*e*) *Month*	*No. of eyes received*	*No. of corneas grafted*
July 1971 ..	3 pairs and 1 eye ball	3
August 1971 ..	Nil	Nil
September 1971 ..	1 pair	1
October 1971 ..	1 pair and 1 eye ball	2
November 1971 ..	2 pairs	4
December 1971 ..	Nil	Nil
January 1972 ..	1 pair	1
February 1972 ..	4 pairs	6
March 1972 ..	3 pairs	3
April 1972 ..	1 pair	2
May 1972 ..	Nil	Nil
June 1972 ..	Nil	Nil

ಶ್ರೀ ಎಸ್. ಕರಿಯಪ್ಪ.—ಕಣ್ಣು ಗುಡ್ಡೆಗಳನ್ನು 1972ನೇ ಮೇ ಮತ್ತು ಜೂನ್ ತಿಂಗಳುಗಳಲ್ಲಿ ತರಿಸಿಕೊಳ್ಳದೇ ಹೋದ ಪ್ರಯುಕ್ತ ಅದು ಮದ್ರಾಸ್‌ಗೆ ಹೋಯಿತು; ಇಲ್ಲಿರುವ ಡಾಕ್ಟರ್‌ಗಳು ಆ ಬಗ್ಗೆ ಆಸಕ್ತಿ ತೋರಿಸದೆ ಇದ್ದುದರಿಂದ ಆ ರೀತಿ ಆಯಿತು ಎಂದು ಹೇಳುತ್ತಿದ್ದಾರೆ? ಅದು ನಿಜವೇ?

† ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ವಿಚಾರ ಮಾಡುತ್ತೇನೆ. ಏತಕ್ಕೆ ತರಿಸಿಕೊಳ್ಳಲಿಲ್ಲ ಎಂಬುದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಸ್. ಕರಿಯಪ್ಪ.—ಈಗ ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆ, ಬೆಂಗಳೂರಿನ ಎಚ್. ಎ. ಎಲ್. ಆಸ್ಪತ್ರೆ, ಬೆಂಗಳೂರಿನ ಮಹಾಬೋಧಿ ಮೈತ್ರಿ ಮಂಡಲದವರ ಆಶ್ರಯದಲ್ಲಿರುವ ಸಿಂಹಳ ಅಂತರಾಷ್ಟ್ರೀಯ ನೇತ್ರಕೋಠಿಯಿಂದ ನೇತ್ರದಾನಗಳನ್ನು ಸ್ವೀಕರಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಬೇರೆ ಕಡೆಗಳಿಂದ ಸ್ವೀಕರಿಸುವುದಕ್ಕೆ ಸಾಧ್ಯವಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪ.—ಬೇರೆ ಕಡೆಗಳಿಂದ ತರಿಸಿಕೊಳ್ಳಲಿಕ್ಕೆ ಸಾಧ್ಯತೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಸಹ ವಿಚಾರ ಮಾಡುತ್ತೇನೆ.

ಶ್ರೀ ಎಸ್. ಕರಿಯಪ್ಪ.—ಈಗ ಬೆಂಗಳೂರಿನ ಕಣ್ಣಾನ್ನತ್ರೆಯಲ್ಲಿ ನೇತ್ರಕೊಠಿಯೊಂದನ್ನು ಪ್ರಾರಂಭಿಸಿರುವಂತೆ ರಾಜ್ಯದ ಎಲ್ಲ ಜನರಲ್ ಆಸ್ಪತ್ರೆಗಳಲ್ಲಿಯೂ ಪ್ರಾರಂಭಿಸುವುದಕ್ಕೆ ಸಾಧ್ಯ ವಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಒಂದು ಸ್ಪೆಷಲ್ ಚೆಕ್ನಿಕಲ್ ಜ್ಞೈಪ್ ಆಫ್ ವರ್ಕ್ ಎಂದು ಹೇಳುತ್ತಾರೆ. ಇದಕ್ಕೆ ನಮ್ಮ ಕಣ್ಣಾನ್ನತ್ರೆಯಲ್ಲಿ ಹೆಚ್ಚಿನ ಅನುಕೂಲತೆ ಇದೆ ಎಂದು ತಿಳಿದುಬಂದಿದೆ. ಇದೂ ಅಲ್ಲದೆ ಕಣ್ಣುಗುಡ್ಡೆಗಳನ್ನು ತೆಗೆದ ಮೇಲೆ ಅದನ್ನು ಕೇವಲ ಒಂದೆರಡು ದಿವಸಗಳಲ್ಲಿ ಉಪ ಯೋಗಿಸಬೇಕು. ಅವುಗಳನ್ನು ಒಂದು ವರ್ಷದವರೆಗೆ ಇಡಬೇಕೆಂದು ಕೇಳುವುದಾದರೆ, ಅದಕ್ಕೆ ಸ್ಪೆಷಲ್ ಸೊಫಿಸ್ಟಿಕೇಟೆಡ್ ಎಕ್ವಿಪ್‌ಮೆಂಟ್ ಬೇಕು. ಈ ಎಕ್ವಿಪ್‌ಮೆಂಟ್ ಕಣ್ಣಾನ್ನತ್ರೆಯಲ್ಲಿ ಇದೆ. ಅದೂ ಅಲ್ಲದೆ ಈ ಎಕ್ಸ್‌ಪರಿಮೆಂಟ್ ಪ್ರಾರಂಭವಾಗಿರುವುದು ಎರಡು ವರ್ಷಗಳ ಹಿಂದೆ. ಮುಖ್ಯವಾಗಿ ಕಣ್ಣುಗುಡ್ಡೆಗಳನ್ನು ಕೊಡುವ ಜನರು ಬೇಕು. ಅದಕ್ಕೆ ಡೋನರ್ ಒಪ್ಪಿ ಕೊಡ ಬೇಕು. ಎಲ್ಲರೂ ಕಣ್ಣುಗುಡ್ಡೆಗಳನ್ನು ಕೊಡುವುದಕ್ಕೆ ಮುಂದೆ ಬಂದಿಲ್ಲ. ಆದ್ದರಿಂದ ಈ ಬಗ್ಗೆ ಸ್ವಲ್ಪ ಯೋಚನೆ ಮಾಡಿ ಕೆಲಸ ಮಾಡಬೇಕಾಗುತ್ತದೆ. ಅನುಭವದ ಮೇಲೆ ಬೇರೆ ಕಡೆಗಳಲ್ಲಿಯೂ ಪ್ರಾರಂಭಿಸುವುದಕ್ಕೆ ಸಾಧ್ಯವೇ ಅಥವಾ ಇಲ್ಲವೇ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಕಣ್ಣು ಗುಡ್ಡೆಗಳನ್ನು ದಾನವಾಗಿ ಸರಕಾರದವರು ತೆಗೆದು ಕೊಳ್ಳುವುದರ ಬಗ್ಗೆ ಮಾನ್ಯ ಮಂತ್ರಿಗಳು ಇಲ್ಲ ಹೇಳಿದರು. ಈಗ ಒಂದೆರಡು ಕಡೆಗಳಿಂದ ಮಾತ್ರ ತರಿಸುತ್ತಿದ್ದೇವೆ ಎಂದು ಹೇಳಿದರು. ಸರಕಾರದವರು ಇನ್ನೂ ಹೆಚ್ಚು ಪ್ರಯತ್ನಪಟ್ಟು ಬೇರೆ ಕಡೆ ಗಳಿಂದಲು ತರಿಸುವುದು ಯುಕ್ತವಲ್ಲವೇ ಮತ್ತು ದಾನಮಾಡುವವರ ವಿವರಗಳೆಲ್ಲಾ ಸರಕಾರಕ್ಕೆ ಗೊತ್ತಾಗುತ್ತದೆಯೇ ? ಮತ್ತು ಇದರ ಬಗ್ಗೆ ಯಂತ್ರ ತರಿಸಬೇಕು ಎಂದು ಹೇಳಿದರು. ಇದನ್ನು ಯಾವಾಗ ತರಿಸಲು ಯತ್ನ ಮಾಡುತ್ತಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಬದುಕಿರುವಾಗ ಕೆಲವರು ಅವರ ಗುಡ್ಡೆಗಳನ್ನು ಅವರು ಸತ್ತ ಮೇಲೆ ಸರಕಾರ ತೆಗೆದುಕೊಳ್ಳಬಹುದು ಎಂದು ಹೇಳಬಹುದು. ಆದರೆ ಅಂತಹ ಮನುಷ್ಯ ಸತ್ತಾಗ ಅವರಿಂದ ಕಣ್ಣುಗುಡ್ಡೆಗಳನ್ನು ತೆಗೆಯಲು ಅವರ ಸಂಬಂಧೀಕರು ಅಡ್ಡಿಪಡಿಸದ್ದೇ ಇದ್ದರೆ ಸರಕಾರ ಅದನ್ನು ತೆಗೆದುಕೊಳ್ಳಬಹುದು. ಆದರೆ ಈಗಿನ ನಿಯಮಗಳ ಪ್ರಕಾರ ಯಾರಾದರೂ ಅಡ್ಡಿ ಪಡಿಸಿದರೆ ಅಂತಹವರಿಂದ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇನ್ನೂ ನಮ್ಮ ಜನಗಳಲ್ಲಿ ಅಂತಹ ರಾಷ್ಟ್ರೀಯ ಭಾವನೆ ಬೆಳೆದು ಬಂದಿಲ್ಲ. ಈಗಾಗಲೇ ಮಾನ್ಯಡಾಕ್ಟರಾದ ಶ್ರೀ ಮೋದಿಯ ವರು ಅವರ ಕಣ್ಣುಗುಡ್ಡೆಗಳನ್ನು ಅವರ ನಿಧನಾನಂತರ ತೆಗೆದುಕೊಳ್ಳಬೇಕೆಂದು ಅದಕ್ಕೆ ಒಂದು ಟ್ರಸ್ಟು ಕೂಡ ಮಾಡಿದ್ದಾರೆ. ಹೀಗೆ ಯಾರೂ ಬೇರೆ ಕಡೆಗಳಲ್ಲಿ ಮುಂದೆ ಬಂದು ಅವರ ಕಣ್ಣು ಗುಡ್ಡೆಗಳನ್ನು ಅವರ ನಿಧನಾನಂತರ ತೆಗೆದುಕೊಳ್ಳಬೇಕೆಂದು ಹೆಚ್ಚಾಗಿ ಹೇಳುತ್ತಿಲ್ಲ. ಅಲ್ಲದೆ ಕೆಲವರು ಹೇಳಿದರೂ ಅವರು ಸತ್ತ ಮೇಲೆ ಅವರ ಸಂಬಂಧೀಕರು ಅಡ್ಡಿ ಮಾಡಿದರೆ ಆಗ ಕಣ್ಣು ಗುಡ್ಡೆಗಳನ್ನು ತೆಗೆಯಲು ಬರುವುದಿಲ್ಲ. ಯಂತ್ರದ ವಿಚಾರವನ್ನು ಹೇಳಿದರು. ಇದರ ಬಗ್ಗೆ ಸರಕಾರ ಇನ್ನೂ ವಿಚಾರ ಮಾಡಬೇಕಾಗಿದೆ. ಇದು ಅಮೆರಿಕಾದಲ್ಲಿದೆಯೆಂದು ಕೇಳಿದ್ದೇವೆ. ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ರಾಜ್ಯದಲ್ಲಿರುವ ಡಾಕ್ಟರು ಮೋದಿಯವರ ನೆರ ವನ್ನು ಸರಕಾರ ಯಾವ ರೀತಿ ಪಡೆಯುತ್ತಿದೆ ಮತ್ತು ಅವರಿಗೆ ಯಾವ ವಿಧವಾದ ನೆರವುಗಳನ್ನು ಕೊಡುತ್ತಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಡಾಕ್ಟರು ಮೋದಿಯವರು ನಮ್ಮ ಸರಕಾರಕ್ಕೆ ಯಾವಾಗಲೂ ಸಹಾಯ ಮಾಡುತ್ತಿದ್ದಾರೆ ಮತ್ತು ಅವರ ಸಹಾಯವನ್ನು ಪಡೆಯುತ್ತಲೂ ಇದ್ದೇವೆ. ಸರಕಾರ ದಿಂದ ಅವರಿಗೆ ಬೇಕಾಗುವ ಶಾಲಾ ಕಾಲೇಜುಗಳ ಕಟ್ಟಡಗಳನ್ನು ಕೊಡಲಾಗುತ್ತಿದೆ. ಸರಕಾರಕ್ಕೆ ಅವರ ಅವಶ್ಯಕತೆ ಬಂದಾಗಲೆಲ್ಲಾ ಅವರು ಸಹಾಯ ಮಾಡುತ್ತಿದ್ದಾರೆ ಮತ್ತು ಅವರಿಗೆ ಬೇಕಾದ ಅನುಕೂಲಗಳನ್ನೆಲ್ಲಾ ಸರಕಾರ ಮಾಡಿಕೊಡುತ್ತಿದೆ. ಮತ್ತು ಇವರಿಗೆ ಬೇರೆ ರೀತಿಯಾದ ಗ್ರಾಂಟುಗಳನ್ನು ಕೊಡುವಾಗುತ್ತಿದೆ ಮತ್ತು ಅವರ ಸಂಸ್ಥೆಯೇ ಈಗ ಒಂದು ರೀತಿಯಾದ ಸೆರ್ಪ್ ಸಪೋರ್ಟಿಂಗ್ ಸಂಸ್ಥೆಯಂತೆ ಆಗಿದೆ.

ಶ್ರೀ ಕೆ. ಪ್ರಭಾಕರ್.—ಕಣ್ಣುಗುಡ್ಡೆಯನ್ನು ತೆಗೆದ ಮೇಲೆ ಎಷ್ಟು ಗಂಟೆಗಳೊಳಗಾಗಿ ಅದನ್ನು ಮತ್ತೆ ಉಪಯೋಗಿಸಬಹುದು ಎಂದು ಪರಿಣತರು ನಿರ್ಧರಿಸಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಗುಡ್ಡೆ ತೆಗೆದ ಆರು ಗಂಟೆಗಳೊಳಗಾಗಿ ಅದನ್ನು ಮತ್ತೆ ಉಪ ಯೋಗಿಸಬಹುದು ಎಂದು ಹೇಳುತ್ತಾರೆ.